KATK510022692018

# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕುಣಿಗಲ್

**ಉಪಸ್ಥಿತರು: ಶ್ರೀಮತಿ ಸುಜಾತ ಎ ಬಿ.**

**ಬಿ.ಎ.ಎಲ್., ಎಲ್.ಎಲ್.ಬಿ.,**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ**

**ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**

## ದಿನಾಂಕಃ 2ನೇ ಜುಲೈ ಮಾಹೆ 2026

## ಸಿ.ಸಿ.ಸಂಖ್ಯೆಃ 1094/2018

**ಪಿರ್ಯಾದುದಾರರು** ಃ ಕರ್ನಾಟಕ ಸರ್ಕಾರವನ್ನು

ಪ್ರತಿನಿಧಿಸುವವರು

ಪೊಲೀಸ್ ಉಪನಿರೀಕ್ಷಕರು

ಕುಣಿಗಲ್ ಪೊಲೀಸ್ ಠಾಣೆ,

ಕುಣಿಗಲ್.

(ಪ್ರತಿನಿಧಿಸುವವರು ಮಾನ್ಯ ಸಹಾಯಕ
ಸರ್ಕಾರಿ ಅಭಿಯೋಜಕರು)

**-ವಿರುದ್ಧ-**

**ಆರೋಪಿತರು** ಃ ಎ1. **ಸಿದ್ದಗಂಗಯ್ಯ ಬಿನ್ ಲಿಂಗಪ್ಪ,**

ವಯಸ್ಸು ಸುಮಾರು 45 ವರ್ಷ,

**ಎ2. ಸಿದ್ದೇಶ ಬಿನ್ ಲೇ. ಪುಟ್ಟರಾಮಯ್ಯ,**

ವಯಸ್ಸು ಸುಮಾರು 45 ವರ್ಷ,

**ಎ3. ಗಂಗಮ್ಮ ಕೋಂ ಸಿದ್ದೇಶ,**

ವಯಸ್ಸು ಸುಮಾರು 35 ವರ್ಷ,

**ಎ4. ಬೈರಯ್ಯ ಬಿನ್ ಲೇ. ಪುಟ್ಟರಾಮಯ್ಯ,**

ವಯಸ್ಸು ಸುಮಾರು 48 ವರ್ಷ,

**ಎ5. ಹೇಮಲತಾ ಕೋಂ ಸಿದ್ದಗಂಗಯ್ಯ ,**

ವಯಸ್ಸು ಸುಮಾರು 35 ವರ್ಷ,

**ಎಲ್ಲರ ವಾಸಃ** ಗೌಡಯನ್ನಪಾಳ್ಯ ಗ್ರಾಮ,

ಹುತ್ರಿದುರ್ಗ ಹೋಬಳಿ, ಕುಣಿಗಲ್ ತಾಲ್ಲೂಕು.

**( ಪ್ರತಿನಿಧಿಸುವವರು ಶ್ರೀ ಕೆ.ಜಿ.ಪಿ, ವಕೀಲರು)**

*****

| | | |
|---|---|---|
| 1. | ಫಿರ್ಯಾದಿ ಹೆಸರುಃ | ಗೌಡಯ್ಯ |
| 2. | ಸಾಕ್ಷ್ಯ ಪ್ರಾರಂಭವಾದ ದಿನಃ | 19.05.2023 |
| 3. | ಸಾಕ್ಷ್ಯ ಮುಕ್ತಾಯವಾದ ದಿನಃ | 17.01.2026 |
| 4. | ಆರೋಪಿತರು ಸಲಾದ ಕಲಂಃ | ಭಾ.ದಂ.ಸಂ.ಕಲಂ |

447.341.504
ಮತ್ತು 506 ಸಹ ವಾಚಕ
ಕಲಂ 149 ರಡಿಯಲ್ಲಿ

5. ನ್ಯಾಯಾಧೀಶರ ಅಭಿಪ್ರಾಯಃ ಆರೋಪಿತರು
ತಪ್ಪಿತಸ್ಥರಲ್ಲವೆಂದು

6. ತೀರ್ಪಿನ ದಿನಾಂಕಃ 02.07.2026

**ತೀರ್ಪು**

ಈ ಪ್ರಕರಣವನ್ನು ಕುಣಿಗಲ್ ಪೊಲೀಸ್ ಠಾಣೆಯ ಪೊಲೀಸರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 447,341,504 ಮತ್ತು 506 ಸಹ ವಾಚಕ ಕಲಂ 149 ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳ ಪ್ರಕರಣವನ್ನು ದಾಖಲಿಸಿಕೊಂಡಿರುತ್ತಾರೆ.

**2. ಈ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ.**

ದಿನಾಂಕ 04.04.2018 ರಂದು ಕುಣಿಗಲ್ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಕುಣಿಗಲ್ ತಾಲ್ಲೂಕು, ಗೌಡಯ್ಯನಪಾಳ್ಯ ಗ್ರಾಮದ ಚಾಸಾ-1 ರವರ ಹೊಲಕ್ಕೆ ಗೊಬ್ಬರ ಹೊಡೆಯಲು 1 ಮತ್ತು 2ನೇ ಆರೊಪಿತರು ಅಕ್ರಮ ಪ್ರವೇಶ ಮಾಡಿದ್ದು, ಈ ವಿಚಾರದ ಬಗ್ಗೆ ಕೇಳಿದ ಚಾಸಾ.1 ಮತ್ತು 2 ರವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದು, ನಂತರ ದಿನಾಂಕಃ 06.04.2018 ರಂದು ಆರೋಪಿಗಳು ಈ ವಿಚಾರದಲ್ಲಿ ದ್ವೇಷವಿಟ್ಟುಕೊಂಡು ಗೌಡಯ್ಯನಪಾಳ್ಯ ಗ್ರಾಮದ ಸರ್ಕಲ್ ಅರಳಿಮರ ಕಟ್ಟೆಯ ಹತ್ತಿರ ಚಾಸಾ.1 ಮತ್ತು 2 ರವರನ್ನು ಆರೋಪಿತರು ಅಕ್ರಮ ತಡೆಯನ್ನುಂಟು ಮಾಡಿ ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದು ಚಾಸಾ.1 ರವರು ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ

ಮೇಲ್ಕಾಣಿಸಿದ ಅಪರಾಧಗಳ ಕಲಂಗಳಡಿಯಲ್ಲಿ ದೋಷಾರೋಪಣಾ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

**3.** ನ್ಯಾಯಾಲಯವು ದೋಷಾರೋಪಣಾ ಪತ್ರವನ್ನು ಸ್ವೀಕರಿಸಿ, ಪರಿಶೀಲಿಸಿದ ನಂತರ ಸಂಜ್ಞಾನವನ್ನು ತೆಗೆದುಕೊಂಡಿರುತ್ತದೆ, ಆರೋಪಿತರು ಈಗಾಗಲೇ ಜಾಮೀನಿನ ಮೇಲೆ ಇದ್ದು, ನ್ಯಾಯಾಲಯದಿಂದ ಆದೇಶಿಕೆಯನ್ನು ಹೊರಡಿಸಲಾಗಿ ಆರೋಪಿತರು ನ್ಯಾಯಾಲಯಕ್ಕೆ ಬಂದು ಹಾಜರಾಗಿರುತ್ತಾರೆ. ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 207ರ ಅಡಿಯಲ್ಲಿ ತಿಳಿಸಿದಂತೆ ಪ್ರಕರಣದ ದಾಖಲೆಗಳನ್ನು ಆರೋಪಿತರಿಗೆ ಕೊಡಲಾಯಿತು. ಆ ನಂತರ ಆರೋಪಿತರ ವಿರುದ್ಧ ಆರೋಪವನ್ನು ರಚಿಸಲಾಯಿತು. ಆರೋಪಿತರು ತಮ್ಮ ವಿರುದ್ಧದ ಆಪಾದನೆಯನ್ನು ಅಥವಾ ಆರೋಪವನ್ನು ಅಲ್ಲಗಳೆದಿರುವ ಕಾರಣ ಅದನ್ನು ರುಜುವಾತುಪಡಿಸುವ ಸಲುವಾಗಿ ಅಭಿಯೋಜನೆಯು ಒಟ್ಟು 3 ಜನರ ಸಾಕ್ಷ್ಯವನ್ನು ಸಾಕ್ಷಿಪಟ್ಟಿಯಲ್ಲಿ ಗುರುತಿಸಿಕೊಂಡಿದ್ದು, ಅದರಲ್ಲಿ ಪ್ರಕರಣದ ಪಿರ್ಯಾದಿ ಚಾಸಾ-1 ರವರನ್ನು ಪ್ರಾಸಾ-1 ಎಂದು , ಪ್ರಕರಣದ ಗಾಯಾಳು ಸಾಕ್ಷಿದಾರರು ಚಾಸಾ-2 ರವರನ್ನು ಪ್ರಾಸಾ-2 ಎಂದು, ಪ್ರಕರಣದ ತನಿಖಾಧಿಕಾರಿಯಾದ ಚಾಸಾ.6 ರವರನ್ನು ಪ್ರಾಸಾ-3 ಎಂದು ಸಾಕ್ಷೀಕರಿಸಿಕೊಂಡಿರುತ್ತಾರೆ.

**4.** ಒಟ್ಟು 3 ದಾಖಲೆಗಳನ್ನು ಹಾಜರುಪಡಿಸಿ ಅವುಗಳನ್ನು ಕ್ರಮವಾಗಿ ನಿಪಿ.1 ರಿಂದ ನಿಪಿ 3 ಎಂದು ಗುರುತಿಸಿಕೊಂಡಿದ್ದು, ನಿಪಿ.1 ದೂರು, ನಿಪಿ.2 ಸ್ಥಳ ಪಂಚನಾಮೆ, ನಿಪಿ.3 ಪ್ರಥಮ ವರ್ತಮಾನ ವರದಿ ಎಂದು ಗುರುತಿಸಿಕೊಂಡಿರುತ್ತಾರೆ.

**5.** ದಂಡ ಪ್ರಕ್ರಿಯಾ ಸಂಹಿತೆ ಕಲಂ. 313ರ ಅಡಿಯಲ್ಲಿ ಆರೋಪಿತರ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಯಿತು. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಹಾಗೂ ಆರೋಪಿತರ

ಪರ ವಕೀಲರ ವಾದ-ವಿವಾದಗಳನ್ನು ಆಲಿಸಲಾಯಿತು ಹಾಗೂ ಲಭ್ಯವಿರುವ ಸಾಕ್ಷ್ಯಾಧಾರಗಳನ್ನು ಮತ್ತು ದಾಖಲೆಗಳನ್ನು ಪರಿಶೀಲಿಸಲಾಯಿತು. ಈ ಕೆಳಗಿನ ಅಂಶಗಳು ನನ್ನ ಪರ್ಯಾಲೋಚನೆಗೆ ಉದ್ಭವಿಸಿರುತ್ತವೆಃ

**ಅಂಶ-1-** ದಿನಾಂಕ 04.04.2018 ರಂದು ಕುಣಿಗಲ್ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಕುಣಿಗಲ್ ತಾಲ್ಲೂಕು, ಗೌಡಯ್ಯನಪಾಳ್ಯ ಗ್ರಾಮದ ಚಾಸಾ-1 ರವರ ಹೊಲಕ್ಕೆ ಗೊಬ್ಬರ ಹೊಡೆಯಲು 1 ಮತ್ತು 2ನೇ ಆರೋಪಿತರು ಅಕ್ರಮ ಪ್ರವೇಶ ಮಾಡಿದ್ದು, ಆ ಮೂಲಕ ಭಾ.ದಂ.ಸಂ. **ಕಲಂ 447 ಸಹವಾಚಕ 149** ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಎಸಗಿರುತ್ತಾನೆಂದು ಅಭಿಯೋಜನೆಯವರು ರುಜುವಾತುಪಡಿಸಿರುತ್ತಾರೆಯೇ?

**ಅಂಶ-2-** ಮೇಲೆ ಹೇಳಿದ ದಿನಾಂಕ, ವೇಳೆ ಹಾಗೂ ಸ್ಥಳದಲ್ಲಿ, ಆರೋಪಿತರು ಅಪರಾಧ ಎಸಗುವ ಏಕೋದ್ದೇಶವನ್ನಿಟ್ಟುಕೊಂಡು ದಿನಾಂಕಃ 06.04.2018 ರಂದು ಆರೋಪಿತರು ಈ ವಿಚಾರದಲ್ಲಿ ದ್ವೇಷವಿಟ್ಟುಕೊಂಡು ಗೌಡಯ್ಯನಪಾಳ್ಯ ಗ್ರಾಮದ ಸರ್ಕಲ್ ಅರಳಿಮರ ಕಟ್ಟೆಯ ಹತ್ತಿರ ಚಾಸಾ.1 ಮತ್ತು 2 ರವರನ್ನು ಆರೋಪಿತರು ಅಕ್ರಮ ತಡೆಯನ್ನುಂಟು ಮಾಡಿ, ಆ ಮೂಲಕ **ಭಾ.ದಂ.ಸಂ. ಕಲಂ 341 ಸಹವಾಚಕ 149** ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ರುಜುವಾತುಪಡಿಸಿರುತ್ತಾರೆಯೇ?

**ಅಂಶ-3-** ಮುಂದುವರೆದು ಅದೇ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರು ಅಪರಾಧ ಮಾಡಬೇಕೆನ್ನುವ ಏಕೋದ್ದೇಶದಿಂದ ಚಾಸಾ-1 ಮತ್ತು 2 ರವರಿಗೆ ಅವಾಚ್ಯ ಶಬ್ಧಗಳಿಂದ ಬೈದು ಹೊಡೆಯಲು ಬಂದಿದ್ದು, ಆ ಮೂಲಕ **ಭಾ.ದಂ.ಸಂ. ಕಲಂ 504 ಸಹವಾಚಕ 149** ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ರುಜುವಾತುಪಡಿಸಿರುತ್ತಾರೆಯೇ?

**ಅಂಶ-4-** ಮುಂದುವರೆದು ಅದೇ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರು ಅಪರಾಧ ಮಾಡಬೇಕೆನ್ನುವ ಏಕೋದ್ದೇಶದಿಂದ ಚಾಸಾ-1 ಮತ್ತು 2 ರವರಿಗೆ ಪ್ರಾಣ ಬೆದರಿಕೆ ಹಾಕಿದ್ದು, ಆ ಮೂಲಕ ಭಾ.ದಂ.ಸಂ. ಕಲಂ 506 ಸಹವಾಚಕ 149 ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ರುಜುವಾತುಪಡಿಸಿರುತ್ತಾರೆಯೇ?

**ಅಂಶ-5-** ಆದೇಶ ವೇನು ?

**6.** ಈ ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರವು ಈ ಕೆಳಕಂಡ ಕಾರಣಗಳಂತೆ ಇರುತ್ತದೆಃ

ಅಂಶ-1 ರಿಂದ 4- **ನಕಾರಾತ್ಮಕವಾಗಿ,**

ಅಂಶ-5 - ಈ ಕೆಳಕಂಡ ಕಾರಣಗಳಿಗಾಗಿ ಅಂತಿಮ ಆದೇಶದಂತೆ.

## ಕಾರಣಗಳು

**7.** **ಅಂಶ 1 ರಿಂದ 4 :** ಈ ಅಂಶಗಳು ಒಂದಕ್ಕೊಂದು ಪೂರಕವಾಗಿದ್ದು ಒಂದೇ ಘಟನೆಗೆ ಸಂಬಂಧಪಟ್ಟಿದ್ದುದರಿಂದ, ಸದರಿ ಅಂಶಗಳನ್ನು ಒಟ್ಟಿಗೆ ಗಮನಕ್ಕೆ ತೆಗೆದುಕೊಂಡಿರುತ್ತೇನೆ.

ಈ ಪ್ರಕರಣವನ್ನು ಪೊಲೀಸರು ಆರೋಪಿತರ ವಿರುದ್ಧ ದಾಖಲಿಸಿಕೊಂಡು ತನಿಖೆ ಮಾಡಿ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ಪಿರ್ಯಾದುದಾರರು, ಗಾಯಾಳು ಸಾಕ್ಷಿದಾರರು ಹಾಗೂ ತನಿಖಾಧಿಕಾರಿ ಸಾಕ್ಷ್ಯವನ್ನು ನುಡಿದಿರುವುದು ಇರುತ್ತದೆ .

**8.** ಈ ಪ್ರಕರಣದಲ್ಲಿ ಅಭಿಯೋಜನೆಯು ದೂರುದಾರ ಸಾಕ್ಷಿದಾರರಾದ ಚಾಸಾ.1 ರವರನ್ನು ಪ್ರಾಸಾ.1 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ. ಪ್ರಾಸಾ.1 ಗೌಡಯ್ಯ ರವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-2 ತನ್ನ ಹೆಂಡತಿಯಾಗಿದ್ದು , ಹೀಗೆ 5 ವರ್ಷಗಳ ಹಿಂದೆ ತಾವು ಹೊಸುರು ಗ್ರಾಮಕ್ಕೆ ಸಂಬಂಧಿಸಿದ ಸರ್ವೆ ನಂ.12/4, 12/5 ತಮಗೆ ಸೇರಿದ ಜಮೀನಿನಲ್ಲಿ ಬೆಳಿಗ್ಗೆ 11 ಗಂಟೆ ಸಮಯದಲ್ಲಿ ತಾನು ಮತ್ತು ತನ್ನ ಹೆಂಡತಿ ಕೆಲಸ ಮಾಡುತ್ತಿದ್ದು , 1 ಮತ್ತು 2ನೇ ಆರೋಪಿತರು ತಮ್ಮ ಜಮೀನಿನಲ್ಲಿ ಹಾಕಿದ್ದ ತಂತಿ ಬೇಲಿ 3 ಕಲ್ಲು ಕಂಬವನ್ನು ಕಿತ್ತು ಹಾಕಿ, ತಾವು ಅಲ್ಲೇ ಇದ್ದು ಅವರನ್ನು ತಡೆಯಲು ಹೋದಾಗ ತಮ್ಮ ಜಮೀನಿಗೆ ಅಕ್ರಮವಾಗಿ ಟ್ರ್ಯಾಕ್ಟರ್ ನ್ನು ತೆಗೆದುಕೊಂಡು ಬಂದು ತೆಂಗಿನ ಸಸಿಗಳನ್ನು ಹಾಳು ಮಾಡಿದ್ದು, ಆ ನಂತರ 1 ಮತ್ತು 2ನೇ ಆರೋಪಿತರು ತನಗೆ ಮತ್ತು ಚಾಸಾ-2ರವರಿಗೆ ಅವಾಚ್ಯ ಶಬ್ಧಗಳಿಂದ ಬೈದು ನಿನ್ನನು ಉಳಿಸಲ್ಲಾ ಕೊಲೆ ಮಾಡುತ್ತೇವೆ ಎಂದು ಬೈದಿದ್ದು, ಆ ನಂತರ ತಾವು ಮನೆಗೆ ಬಂದಿದ್ದು, ಆ ನಂತರ ಬೆಂಗಳೂರಿನಲ್ಲಿದ್ದ ತಮ್ಮ ಮಗನಿಗೆ ಫೋನ್ ಮಾಡಿ ತಿಳಿಸಿ, ನಂತರ 4 ದಿನಗಳ ನಂತರ 2 ರಿಂದ 5ನೇ ಆರೋತಪಿರು ತಮ್ಮ ಜೊತೆ ಗಲಾಟೆ ಮಾಡಿ ಕೊಲೆ ಮಾಡುತ್ತೇವೆ ಎಂದು ಕೊಲೆ ಬೆದರಿಕೆ ಹಾಕಿರುವ ವಿಚಾರವನ್ನು

KATK510022692018



ತಾವು ಕುಣಿಗಲ್ ಪೋಲಿಸ್ ಠಾಣೆಗೆ ಹೋಗಿ ತಿಳಿಸಿ ತಾನು ನಿಪಿ-1 ರಂತೆ ದೂರನ್ನು ನೀಡಿದ್ದು, ಆ ನಂತರ ಪೋಲಿಸರು ತಮ್ಮ ಜಮೀನಿಗೆ ಬಂದು ತಾನು ತೋರಿಸಿದ ಸ್ಥಳದಲ್ಲಿ ಚಾಸಾ-4 ಮತ್ತು 5ರವರ ಸಮಕ್ಷಮ ಬೆಳಗಿನ ಸಮಯದಲ್ಲಿ ನಿಪಿ-2 ರಂತೆ ಸ್ಥಳ ಪಂಚನಾಮೆಯನ್ನು ಜರುಗಿಸಿ, ಆ ದಿನ ತಮ್ಮ ಜೊತೆ ಗಲಾಟೆ ಮಾಡಿದ ಆರೋಪಿತರನ್ನು ಈ ದಿನ ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುವುದಾಗಿ ನುಡಿದಿರುತ್ತಾರೆ.

**9.** ಆರೋಪಿ ಪರ ವಕೀಲರು ಪ್ರಾಸಾ-1 ರವರನ್ನು ಪಾಟೀಸವಾಲಿಗೆ ಒಳಪಡಿಸಿದ್ದು, ಸದರಿಯವರು ಪಾಟೀಸವಾಲಿನಲ್ಲಿ ಪೋಲಿಸ್ ಠಾಣೆಗೆ ದೂರು ನೀಡಲು ಚಾಸಾ.2 ಮತ್ತು ತನ್ನ ಮಗ ಹೋಗಿದ್ದು, ದೂರನ್ನು ಬೆಳಿಗ್ಗೆ 9 ಗಂಟೆ ಸಮಯದಲ್ಲಿ ನೀಡಿದ್ದು, ದೂರನ್ನು ತನ್ನ ಮಗ ಟೈಪ್ ಮಾಡಿಸಿದ್ದು, ಪೂರ್ವಕ್ಕೆಃ ಕೆಂಗಣ್ಣ, ಪಶ್ಚಿಮಕ್ಕೆಃ ರಂಗಣ್ಣ, ಉತ್ತರಕ್ಕೆಃ ಬೋರಯ್ಯ ಮತ್ತು ದಕ್ಷಿಣಕ್ಕೆಃ ರಸ್ತೆ ಇರುವುದಾಗಿ ನುಡಿದಿರುತ್ತಾರೆ.

**10.** ಈ ಪ್ರಕರಣದಲ್ಲಿ ಅಭಿಯೋಜನೆಯ ಗಾಯಾಳು ಸಾಕ್ಷಿದಾರರಾದ ಚಾಸಾ.2 ರವರನ್ನು ಪ್ರಾಸಾ.2 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ. ಪ್ರಾಸಾ.2 ನಾಗರತ್ನಮ್ಮ ರವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-1 ತನ್ನ ಗಂಡ. ಹೀಗೆ 5 ವರ್ಷಗಳ ಹಿಂದೆ ತಾವು ಹೊಸುರು ಗ್ರಾಮಕ್ಕೆ ಸಂಬಂಧಿಸಿದ ಸರ್ವೆ ನಂ.12/4, 12/5 ನಮಗೆ ಸೇರಿದ ಜಮೀನಿನಲ್ಲಿ ಕಲ್ಲು ಕಂಬವನ್ನು ಹಾಕಲು ಸಂಜೆ ಹೋಗಿದ್ದಾಗ 1 ಮತ್ತು 2ನೇ ಆರೋಪಿತರು ತಮ್ಮ ಜಮೀನಿನಲ್ಲಿ ಹಾಕಿದ್ದ ತಂತಿ ಬೇಲಿ 3 ಕಲ್ಲು ಕಂಬವನ್ನು ಕಿತ್ತು ಹಾಕಿದ್ದು , ತಾವು ಅಲ್ಲೇ ಇದ್ದು ಅವರನ್ನು ತಡೆಯಲು ಹೋದಾಗ ತಮ್ಮ ಜಮೀನಿಗೆ ಅಕ್ರಮವಾಗಿ ಟ್ರ್ಯಾಕ್ಟರ್ ನ್ನು ತೆಗೆದುಕೊಂಡು ಬಂದು ತೆಂಗಿನ ಸಸಿಗಳನ್ನು ಹಾಳು ಮಾಡಿ, ಆ ನಂತರ 1 ಮತ್ತು 2ನೇ ಆರೋಪಿತರು ತನಗೆ ಮತ್ತು ಚಾಸಾ-2ರವರು ಅವಾಚ್ಯ ಶಬ್ಧಗಳಿಂದ

ಬೈದು ನಿನ್ನನು ಉಳಿಸಲ್ಲಾ ಕೊಲೆ ಮಾಡುತ್ತೇವೆ ಎಂದು ಬೈದಿದ್ದು , ಆ ನಂತರ ತಾವು ಮನೆಗೆ ಬಂದು, ಆ ನಂತರ 2 ದಿನಗಳ ನಂತರ 2 ರಿಂದ 5ನೇ ಆರೋತಪಿರು ತಮ್ಮ ಜೊತೆ ಗಲಾಟೆ ಮಾಡಿ ಕೊಲೆ ಮಾಡುತ್ತೇವೆ ಎಂದು ಕೊಲೆ ಬೆದರಿಕೆ ಹಾಕಿ ಆರೋಪಿತರು ತಮ್ಮನ್ನು ಅಡ್ಡಗಟ್ಟಿ ಹೊಡೆಯಲು ಬಂದಿದ್ದಾಗಿ, ಚಾಸಾ-3ರವರು ಗಲಾಟೆಯನ್ನು ಬಿಡಿಸಿದ್ದು, ಆ ನಂತರ ಬೆಂಗಳೂರಿನಲ್ಲಿದ್ದ ತಮ್ಮ ಮಗನಿಗೆ ಫೋನ್ ಮಾಡಿ ತಿಳಿಸಿದ್ದು, ಈ ವಿಚಾರವನ್ನು ತಾವು ಕುಣಿಗಲ್ ಪೋಲಿಸ್ ಠಾಣೆಗೆ ಹೋಗಿ ತಿಳಿಸಿದ್ದು, ಆ ದಿನ ನಮ್ಮ ಜೊತೆ ಗಲಾಟೆ ಮಾಡಿದ ಆರೋಪಿತರನ್ನು ಈ ದಿನ ನ್ಯಾಯಾಲಯದಲ್ಲಿ ನೋಡಿ ಗುರುತಿಸುವುದಾಗಿ, ಈ ವಿಚಾರವಾಗಿ ಪೋಲಿಸರಿಗೆ ಹೇಳಿಕೆಯನ್ನು ನೀಡಿರುವುದಾಗಿ ನುಡಿದಿರುತ್ತಾರೆ.

**11.** ಆರೋಪಿ ಪರ ವಕೀಲರು ಪ್ರಾಸಾ-2 ರವರನ್ನು ಪಾಟೀಸವಾಲಿಗೆ ಒಳಪಡಿಸಿದ್ದು, ಸದರಿಯವರು ಪಾಟೀಸವಾಲಿನಲ್ಲಿ ಗಲಾಟೆಯಾದ ದಿನ ತಾವು ತಮ್ಮ ಜಮೀನಿನಲ್ಲಿ ಕಲ್ಲು ಕಂಬವನ್ನು ಹಾಕುತ್ತಿದ್ದ ಸಮಯದಲ್ಲಿ ಆಳುಗಳು ಇದ್ದು, ಅವರ ಹೋದ ನಂತರ ಗಲಾಟೆ ಮಾಡಿರುವುದಾಗಿ ನುಡಿದಿರುತ್ತಾರೆ.

**12.** ಈ ಪ್ರಕರಣದಲ್ಲಿ ಅಭಿಯೋಜನೆಯು ತನಿಖಾಧಿಕಾರಿ ಸಾಕ್ಷಿದಾರರಾದ ಚಾಸಾ.6 ರವರನ್ನು ಪ್ರಾಸಾ.3 ಎಂದು ವಿಚಾರಣಗೆ ಒಳಪಡಿಸಿರುತ್ತಾರೆ. ಪ್ರಾಸಾ.3 ಶ್ರೀನಿವಾಸಾಯ್ಯ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 08.04.2018 ರಂದು ಠಾಣಾಧಿಕಾರಿ ಕರ್ತವ್ಯದಲ್ಲಿದ್ದಾಗ ಸಂಜೆ 8.30ರ ವೇಳೆಗೆ ಚಾಸಾ.1 ರವರು ನಿಪಿ.1 ರಂತೆ ನೀಡಿದ ಲಿಖಿತ ದೂರನ್ನು ಪಡೆದು ಠಾಣಾ ಮೊಕದ್ದಮೆ ದಾಖಲಿಸಿ ನಿಪಿ.3 ರಂತೆ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಮರುದಿನ ಬೆಳಿಗ್ಗೆ 8.15 ರಿಂದ 9.15 ಗಂಟೆ ಸಮಯದಲ್ಲಿ ಚಾಸಾ.1,4

ಮತ್ತು 5 ರವರ ಸಮಕ್ಷಮ ನಿಪಿ.2 ರಂತೆ ಸ್ಥಳ ಪಂಚನಾಮೆಯನ್ನು ಮಾಡಿದ್ದು, ನಂತರ ಅದೇ ದಿನ ಚಾಸಾ.1 ರಿಂದ 3 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದು , ದಿನಾಂಕ 23.05.2018 ರಂದು ಘಟನಾ ಸ್ಥಳದ ಪಹಣಿಯನ್ನು ತಾಲ್ಲೂಕು ಕಚೇರಿಯಿಂದ ಪಡೆದಿದ್ದು , ಆರೋಪಿತರು ತಲೆ ಮರೆಸಿಕೊಂಡಿದ್ದರಿಂದ, ಆರೋಪಿತರ ವಿರುದ್ದ ಕಲಂ 427 ಭಾರತ ದಂಡ ಸಂಹಿತೆ ಹೊರತುಪಡಿಸಿ ಉಳಿದ ಕಲಂಗಳಿಗೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುವುದಾಗಿ ನುಡಿದಿರುತ್ತಾರೆ **.**

**13.** ಆರೋಪಿ ಪರ ವಕೀಲರು ಪ್ರಾಸಾ-3 ರವರನ್ನು ಪಾಟೀಸವಾಲಿಗೆ ಒಳಪಡಿಸಿದ್ದು, ಸದರಿಯವರು ಪಾಟೀಸವಾಲಿನಲ್ಲಿ ನಿಪಿ.1ನ್ನು ತನ್ನ ಮಗನಿಗೆ ತಿಳಿಸಿ ವಿಚಾರ ಮಾಡಿ ತಡವಾಗಿ ನೀಡಿರುವುದಾಗಿ ಚಾಸಾ.1 ರವರು ತಿಳಿಸಿದ್ದು, ದೂರನ್ನು ನೀಡಲು 4 ದಿನ ತಡವಾದ ಬಗ್ಗೆ ಚಾಸಾ.1 ರವರ ಮಗನ ಹೇಳಿಕೆಯನ್ನು ಪಡೆದಿರುವುದಿಲ್ಲ, ಸದರಿ ಸರ್ವೆ ನಂ.12/4ರಲ್ಲಿ ಯಾರು ಸ್ವಾಧೀನದಲ್ಲಿ ಇದ್ದಾರೆ ಎಂದು ತಾನು ತಿಳಿದುಕೊಂಡಿಲ್ಲ, ಸದರಿ ಆಸ್ತಿಯ ಬೇರೆ ಯಾವುದೇ ಕಂದಾಯ ದಾಖಲೆಗಳನ್ನು ಪಡೆದಿರುವುದಿಲ್ಲ, ಸದರಿ ಆಸ್ತಿಯ ಚೆಕ್ಕುಬಂದಿ ತನಗೆ ಹೇಳಲಾಗುವುದಿಲ್ಲ. ಮುಂದುವರೆದು, ತಾನು ಸರ್ವೆ ನಂ.12/4ಕ್ಕೆ ಹೋಗಿಲ್ಲ ಎಂದು ನುಡಿಯುತ್ತಾರೆ.

**14.** ಆರೋಪಿತರ ಪ್ರಕಾರ ತಾವು ಯಾವುದೇ ಗಲಾಟೆಯನ್ನು ಮಾಡಿರುವುದಿಲ್ಲ ಎಂಬುದಾಗಿ ಇರುತ್ತದೆ. ಈ ಪ್ರಕರಣದಲ್ಲಿ ಚಾಸಾ.1 ರವರು ಪೊಲೀಸರಿಗೆ ಮುಂದುವರಿದ ಹೇಳಿಕೆ ನೀಡಿದ್ದು ಸದರಿ ಹೇಳಿಕೆಯಲ್ಲಿ ಆರೋಪಿತರು ಕಲ್ಲು ಕಂಬಗಳನ್ನು ಕಿತ್ತು ಹಾಕಿ ತೆಂಗಿನ ಸಸಿಗಳನ್ನು ಹಾಳು ಮಾಡಿರುತ್ತಾರೆಂದು ದೂರಿನಲ್ಲಿ ತಿಳಿಸಿದ್ದು, ಆದರೆ ಆರೋಪಿಗಳು ಅವರ ಜಮೀನಿಗೆ ಗೊಬ್ಬರ ಹೊಡೆಯಲು ಒಂದು ಕಂಬವನ್ನು ತೆಗೆದು ಗೊಬ್ಬರ ಹೊಡೆದ ಮೇಲೆ ಹಾಗೆಯೇ ನೆಟ್ಟು

ಹೋಗಿದ್ದು ಯಾವುದೇ ಕಂಬವಾಗಲಿ ತೆಂಗಿನ ಸಸಿಯಾಗಲಿ ನಷ್ಟವಾಗಿರುವುದಿಲ್ಲ ಎಂದು ಆ ಕುರಿತು ದೂರನ್ನು ನೀಡುವಾಗ ದೂರನ್ನು ಟೈಪ್ ಮಾಡಿಸುವಾಗ ಟೈಪ್ ಮಾಡುವವರು ತಪ್ಪಾಗಿ ಟೈಪ್ ಮಾಡಿರುತ್ತಾರೆ ಎಂದು ಮರುಹೇಳಿಕೆಯನ್ನು ನೀಡಿರುವುದು ಕಂಡುಬರುತ್ತದೆ. ಆದರೆ ಆ ರೀತಿ ಮರುಹೇಳಿಕೆ ನೀಡಿದ್ದ ವಿಚಾರವನ್ನು ಚಾಸಾ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವುದಿಲ್ಲ ಬದಲಾಗಿ ಆರೋಪಿತರು ತಮ್ಮ ಜಮೀನಿನಲ್ಲಿ ಹಾಕಿದ್ದ ತಂತಿ ಬೇಲಿ 3 ಕಲ್ಲು ಕಂಬವನ್ನು ಕಿತ್ತು ಹಾಕಿದ್ದರು ಮತ್ತು ಟ್ರ್ಯಾಕ್ಟರ್ ತೆಗೆದುಕೊಂಡು ಬಂದು ತೆಂಗಿನ ಸಸಿಗಳನ್ನು ಹಾಳು ಮಾಡಿದ್ದರು ಎಂದು ನುಡಿದಿರುವುದು ಕಂಡುಬರುತ್ತದೆ ಮತ್ತು ಸದರಿ ಹೇಳಿಕೆಯಲ್ಲಿ ಟೈಪ್ ಮಾಡುವವರು ತಪ್ಪಾಗಿ ಮಾಡಿದ್ದರು ಎಂದು ನುಡಿದಿದ್ದು, ಆದರೆ ಚಾಸಾ.1ರವರು ತನ್ನ ಪಾಟಿ ಸವಾಲಿನಲ್ಲಿ ದೂರನ್ನು ತನ್ನ ಮಗ ಟೈಪ್ ಮಾಡಿರುತ್ತಾರೆ ಎಂದು ನುಡಿದಿದ್ದು, ಆದರೆ ನಿಪಿ.1 ದೂರು ಕೈಬರವಣಿಗೆಯಲ್ಲಿರುವುದು ಮತ್ತಷ್ಟು ಅನುಮಾನಕ್ಕೆ ಎಡೆ ಮಾಡಿಕೊಡುತ್ತದೆ.

**15.** ಮುಂದುವರಿದು, ನಿಪಿ.2 ಸ್ಥಳ ಪಂಚನಾಮೆಯಲ್ಲಿ ತನಿಖಾಧಿಕಾರಿ ಸ್ಥಳದಲ್ಲಿ ಯಾವುದೇ ಟ್ರಾಕ್ಟ್ರರ್ ನಿಶಾನೆ ಕಂಡುಬಂದಿಲ್ಲ ಎನ್ನುವುದು ಕಂಡುಬರುತ್ತದೆ. ಚಾಸಾ.1 ರವರು ತಮ್ಮ ದೂರಿನಲ್ಲಿ ತಾವೂ ಕೆಲಸ ಮಾಡುವಾಗ ಆರೋಪಿತರು ಚಾಸಾ.1 ರವರ ಜಮೀನಿಗೆ ಅಕ್ರಮವಾರಿ ಟ್ರಾಕ್ಟ್ರರ್ ತೆಗೆದುಕೊಂಡು ನಮ್ಮ ತೆಂಗಿನ ಮರಗಳನ್ನು ಹಾಳು ಮಾಡಿರುತ್ತಾರೆ ಎಂದು ನಮೂದಿಸಿದ್ದು ಸದರಿ ವಿಚಾರಗಳನ್ನು ತಮ್ಮ ಮುಖ್ಯ ವಿಚಾರಣೆಯಲ್ಲಿ ನುಡಿದಿರುತ್ತಾರೆ. ಈಗಾಗಲೇ ಗಮನಿಸಿದಂತೆ ನಿಪಿ.2 ರಲ್ಲಿ ಟ್ರಾಕ್ಟ್ರರ್ ಓಡಾಡಿದ ನಿಶಾನೆ ಕಂಡುಬಂದಿರುವುದಿಲ್ಲ ಎಂದು ನಮೂದು ಮಾಡಿರುವುದು ಮತ್ತಷ್ಟೂ ಅನುಮಾನಕ್ಕೆ ಎಡಮಾಡಿಕೊಡುತ್ತದೆ. ಅದು ಅಲ್ಲದೆ ದೂರನ್ನು ತನ್ನ ಮಗ ಟೈಪ್ ಮಾಡಿಸಿರುತ್ತಾರೆ ಎಂದು ನುಡಿದಿದ್ದು ಆದರೆ ನಿಪಿ.1 ದೂರು ಕೈ

ಬರವಣಿಗೆಯಲ್ಲಿ ಇರುವುದು ಕಂಡುಬರುತ್ತದೆ. ಬಹು ಮುಖ್ಯವಾಗಿ ಮತ್ತೋರ್ವ ಸಾಕ್ಷಿದಾರರಾದ ಚಾಸಾ.2 ರವರು ಪೋಲಿಸರಿಗೆ ನೀಡಿದ ಹೇಳಿಕೆಯಲ್ಲಿ ತಮ್ಮ ಜಮೀನಿಗೆ ಹಾಕಿದ್ದ ಕಲ್ಲು ಕಂಬಗಳಲ್ಲಿ ಒಂದು ಕಂಬ ಕಿತ್ತು ಪಕ್ಕದಲ್ಲಿರಿಸಿ ಗೊಬ್ಬರ ತುಂಬಿದ ಅವರ ಟ್ರಾಕ್ಟರ್ ತೆಗೆದುಕೊಂಡು ಬಂದು ಮುಂದಿರುವ ಜಮೀನಿಗೆ ಹೋಗಲು ಹೋಗಿರುತ್ತಾರೆ, ಆಗ ಅವರ ಜಮೀನಿನಲ್ಲಿ ಒಂದು ತೆಂಗಿನ ಸಸಿಯ ಗರಿಯು ಮುರಿದಿರುತ್ತದೆ ಎಂದು ಹೇಳಿಕೆ ನೀಡಿರುವುದು ಕಂಡು ಬರುತ್ತದೆ. ಆದರೆ ಸದರಿಯವರು ಆ ರೀತಿ ತೆಂಗಿನ ಗರಿ ಮುರಿದಿತ್ತು ಎಂದು ಮುಖ್ಯ ವಿಚಾರಣೆಯಲ್ಲಿ ನುಡಿಯದೆ ತಮ್ಮ ತೆಂಗಿನ ಸಸಿಯನ್ನು ಹಾಳುಮಾಡಿದ್ದಾರೆ ಎಂದು ನುಡಿದಿರುವುದು ಕಂಡುಬರುತ್ತದೆ.

**16.** ಬಹುಮುಖ್ಯವಾಗಿ ಈ ಪ್ರಕರಣದಲ್ಲಿ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ. 3 ರವರು ಮತ್ತು ಮಹಜರ್ ಸಾಕ್ಷಿದಾರರಾದ ಚಾಸಾ.4 ಮತ್ತು 5 ರವರಿಗೆ ಬಹಳಷ್ಟು ಬಾರಿ ಸಮನ್ಸ್ ಮತ್ತು ಉದ್ಘೋಷಣೆಗಳನ್ನು ಹೊರಡಿಸಿದರು ಅಭಿಯೋಜನೆ ಸದರಿ ಅವರನ್ನು ವಿಚಾರಣೆಗೆ ಒಳಪಡಿಸಿರುವುದಿಲ್ಲ. ಮುಂದುವರಿದು ತನಿಖಾಧಿಕಾರಿಯಾದ ಚಾಸಾ.6 ರವರು ತಾನು ಪಂಚನಾಮೆ ಜರುಗಿಸಿದ ಸ್ಥಳಕ್ಕೆ ಹೋಗಿರುವುದಿಲ್ಲ ಎಂದು ನುಡಿದಿದ್ದು. ಹಾಗಿದ್ದರೆ ನಿಪಿ.2 ಸ್ಥಳ ಪಂಚನಾಮೆಯನ್ನು ಘಟನಾ ಸ್ಥಳಕ್ಕೆ ಹೋಗದೆ ಮತ್ತೆಲ್ಲಿ ಜರುಗಿಸಲಾಯಿತು ಎಂಬ ಅನುಮಾನ ಉಂಟಾಗುತ್ತದೆ. ಅದೂ ಅಲ್ಲದೆ ಚಾಸಾ.1 ನಿಪಿ.1 ರ ದೂರಿನಲ್ಲಿ ತೆಂಗಿನ ಮರಗಳನ್ನು ಹಾಳು ಮಾಡಿದ್ದರು ಎಂದು ನಮೂದಿಸಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ತೆಂಗಿನ ಸಸಿಗಳನ್ನು ಹಾಳುಮಾಡಿದ್ದರು ಎಂದು ನುಡಿದಿರುವುದು ಕಂಡುಬರುತ್ತದೆ. ದೂರುದಾರರಾದ ಚಾಸಾ.1ರವರು ದೂರನ್ನು ತನ್ನ ಮಗ ಟೈಪ್ ಮಾಡಿಸಿರುತ್ತಾರೆ ಎಂದು ನುಡಿದಿರುತ್ತಾರೆ ಆದರೆ ನಿಪಿ.1 ದೂರಿನಲ್ಲಿ ತನ್ನ ಮಗ ಬರಲು ಸಾಧ್ಯವಾಗದೆ ಇದ್ದುದ್ದರಿಂದ ತಡವಾಗಿ ದೂರು ನೀಡುತ್ತಿದ್ದೇನೆ ಎಂದು ನಮಾದು

ಮಾಡಿರುವುದು ಕಂಡುಬರುತ್ತದೆ. ಜೊತೆಗೆ ಪೊಲೀಸ್ ಠಾಣೆಗೆ ಹೋದಾಗ ದೂರು ನೀಡಲು ತನ್ನ ಮಗ ಬಂದಿದ್ದರು ಎಂದು ನುಡಿದಿರುವುದು ಕಂಡುಬರುತ್ತದೆ. ಅದು ಅಲ್ಲದೆ ನಿಪಿ.2 ಸ್ಥಳ ಪಂಚನಾಮೆಗೂ ಚಾಸಾ.1 ರವರು ಪಾಟಿ ಸವಾಲಿನಲ್ಲಿ ನುಡಿದ ಪಂಚನಾಮೆಯ ಚಕ್ಕು ಬಂದಿಗೂ ವ್ಯತ್ಯಾಸವಿರುವುದು ಕಂಡುಬರುತ್ತದೆ. ಚಾಸಾ.1ರವರು ತೆಂಗಿನಮರಗಳನ್ನು ಹಾಳು ಮಾಡಿದ್ದರು ಎಂದು ನಿಪಿ.1 ರಲ್ಲಿ ನಮೂದಿಸಿದ್ದು, ಆದರೆ ತಮ್ಮ ಮುಖ್ಯ ವಿಚಾರಣೆಯಲ್ಲಿ ತೆಂಗಿನ ಸಸಿಗಳನ್ನು ಹಾಳು ಮಾಡಿದ್ದರು ಎಂದು ನಮೂದಿಸಿರುವುದು ಕಂಡುಬರುತ್ತದೆ. ಮುಂದುವರಿದು ದೂರು 2 ದಿನಗಳ ತಡವಾಗಿ ನೀಡಿರುವುದು ಕಂಡುಬರುತ್ತದೆ. ಮತ್ತೋರ್ವ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ.2 ರವರು ಆರೋಪಿತರು ತಮ್ಮ ಜಮೀನಿನಲ್ಲಿ ಹಾಕಿದ್ದ ತಂತಿ ಬೇಲು ತಂತಿ ಬೇಲಿ 3 ಕಲ್ಲು ಕಂಬಗಳನ್ನು ಕಿತ್ತು ಹಾಕಿದ್ದರು ಎಂದು ನೋಡಿರುತ್ತಾರೆ. ಆದರೆ ಪೊಲೀಸರು ಜರುಗಿಸಿದ ಸ್ಥಳ ಪಂಚನಾಮೆಯಿಲ್ಲಿ ಯಾವುದೇ ತೆಂಗಿನ ಮರ ನಾಶವಾಗಿರುವುದಿಲ್ಲ. ಯಾವುದೇ ಕಲ್ಲು ಕಂಬಗಳನ್ನು ಕಿತ್ತು ಹಾಕಿರುವುದಿಲ್ಲ ಅಲ್ಲಿ ಯಾವುದೇ ಹಾನಿಯಾಗಿರುವುದಿಲ್ಲ ಮತ್ತು ಟ್ರಾಕ್ಟರ್ ಓಡಾಡಿರುವ ನಿಶಾನೆ ಕಂಡು ಬಂದಿರುವುದಿಲ್ಲ ಎಂದು ನಮೂದು ಮಾಡಿರುತ್ತಾರೆ.

**17.** ಹಾಗಾಗಿ ಈ ಪ್ರಕರಣದಲ್ಲಿ ಪ್ರಾಸಾ. 1 ರಿಂದ 3 ರವರ ಮುಖ್ಯ ವಿಚಾರಣೆಗೂ ಮತ್ತು ಪಾಟಿ ಸವಾಲಿಗೂ ಬಹಳಷ್ಟು ವ್ಯತಿರಿಕ್ತತೆಗಳಿದ್ದು, ಜೊತೆಗೆ ಅಭಿಯೋಜನೆ ಮಹಜರ ಸಾಕ್ಷಿದಾರರು ಮತ್ತು ಪ್ರತ್ಯಕ್ಷ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಲು ವಿಫಲರಾದ ಕಾರಣ ಅಭಿಯೋಜನೆ ಆರೋಪಿತರು ಚಾಸಾ.1 ರವರ ಜಮೀನನ್ನು ಅಕ್ರಮ ಪ್ರವೇಶ ಮಾಡಿ, ಅವಾಚ್ಯ ಶಬ್ದಗಳಿಂದ ನಿಂದಿಸಿ ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದು ತೀರ್ಮಾನಿಸಲು ಸಾಧ್ಯವಿಲ್ಲ. ಈ ಹಂತದಲ್ಲಿ ಈ ನ್ಯಾಯಾಲಯ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಉಲ್ಲೇಖಿತ ತೀರ್ಪು - **ಶ್ರೀ**

**ಸುರಾಜ್ ಮಾಲ್ ವಿರುದ್ದ ದೆಹಲಿ ಸರ್ಕಾರ (ಎಐಆರ್ 1979 ಎಸ್ ಸಿ 1408)** ನೀಡಿದ ತೀರ್ಪನ್ನು ಉಲ್ಲೇಖಿಸಲಾಗಿದೆ. ಸದರಿ ತೀರ್ಪನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಈ ರೀತಿಯಾಗಿ ಅಭಿಪ್ರಾಯ ವ್ಯಕ್ತಪಡಿಸಿರುತ್ತದೆ. '' It is well settled that where witnesses make two inconsistent statements in their evidence either at one stage or at two stages, the testimony of such witnesses becomes unreliable and unworthy of credence and in the absence of special circumstances no conviction can be based on the evidence of such witness''.

**18.** ಈ ಪ್ರಕರಣದಲ್ಲಿ ಮಹಜರ್ ಸಾಕ್ಷಿದಾರರು ಮತ್ತು ಮತ್ತೋರ್ವ ಪ್ರತ್ಯಕ್ಷ ಸಾಕ್ಷಿದಾರರನ್ನು ಅಭಿಯೋಜನೆ ವಿಚಾರಣೆಗೆ ಒಳಪಡಿಸಲು ವಿಫಲರಾಗಿರುವುದು ಸಹ ಅಭಿಯೋಜನೆ ಪ್ರಕರಣಕ್ಕೆ ಹಿನ್ನಡೆಯುಂಟು ಮಾಡಿರುತ್ತದೆ ಮತ್ತು ಪ್ರಾಸಾ.1 ಮತ್ತು 2 ರವರು ಗಂಡ ಹೆಂಡತಿಯಾಗಿದ್ದು ಒಬ್ಬರಲ್ಲಿ ಒಬ್ಬರು ಹಿತಸಾಕ್ತಿವುಳ್ಳವರಾಗಿರುತ್ತಾರೆ. ಹಾಗಾಗಿ ಸದರಿಯವರು ಅಭಿಯೋಜನೆಗೆ ಬೆಂಬಲಿಸಿ ಸಾಕ್ಷ್ಯ ನುಡಿದಿದ್ದರೂ ಸದರಿ ಸಾಕ್ಷ್ಯ ಆರೋಪಿತರ ವಿರುದ್ದದ ಆಪಾದನೆಯನ್ನು ರುಜುವಾತು ಪಡಿಸಲು ಸಕ್ಷಮವೆಂದು ಪರಿಗಣಿಸಲಾಗುವುದಿಲ್ಲ.

**19.** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ದೂರದಾರ, ಮತ್ತು ಪ್ರತ್ಯಕ್ಷ, ಸಾಕ್ಷಿದಾರರು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿದ್ದು ಸದರಿಯವರ ಸಾಕ್ಷ್ಯವನ್ನು ಪರಿಗಣಿಸಿ ಆರೋಪಿತರು ಅಪರಾಧಕ ಕೃತ್ಯವೆಸಗಿದ್ದಾರೆಂಬ ತೀರ್ಮಾನಕ್ಕೆ ಬರಬಹುದು ಎಂದು

ವಾದ ಮಂಡಿಸಿರುತ್ತಾರೆ. ಆದರೆ ಪ್ರಾಸಾ.1 ರಿಂದ 3 ರವರ ಮುಖ್ಯ ವಿಚಾರಣೆ ಹಾಗೂ ಪಾಟೀ ಸವಾಲಿಗೂ ಬಹಳಷ್ಟು ವ್ಯತಿರಿಕ್ತಗಳಿದ್ದು ಸದರಿಯವರ ಸಾಕ್ಷ್ಯದ ಆಧಾರದ ಮೇಲೆ ಆರೋಪಿತರು ಅಭಿಯೋಜನೆ ಹೇಳಿದಂತೆ ಅಪರಾಧವೆಸಗಿರುತ್ತಾರೆ ಎಂದು ತೀರ್ಮಾನಿಸಲು ಸಾಧ್ಯವಿಲ್ಲ. ಮುಂದುವರಿದು ನ್ಯಾಯಾಲಯದ ಮುಂದಿರುವ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಾಧಾರಗಳನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ, ಅವುಗಳು ಒಂದಕ್ಕೊಂದು ಪೂರಕವಾಗದೇ ಇರುವುದರಿಂದ ಅಭಿಯೋಜನೆಯ ಪ್ರಕರಣದ ಮೇಲೆ ಸಂಶಯ ಉದ್ಭವವಾಗುತ್ತದೆ.

**20.** ಮೇಲ್ಕಂಡ ಸಂಗತಿಗಳನ್ನು ಗಮನಿಸಿದಾಗ ಆರೋಪಿತರು ಅಪರಾಧ ಎಸಗಿರುವುದನ್ನು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸಿರುವುದಿಲ್ಲ. ಈ ಪ್ರಕರಣದಲ್ಲಿ ಲಭ್ಯವಿರುವ ಮೌಖಿಕ ಸಾಕ್ಷ್ಯ ಮತ್ತು ದಾಖಲಾತಿಗಳನ್ನು ಪರಿಶೀಲನೆ ಮಾಡಲಾಗಿ ಆರೋಪಿತರು ದೋಷಾರೋಪಣ ಪಟ್ಟಿಯಲ್ಲಿ ಹೇಳಿರುವಂತಹ ಯಾವುದೇ ಅಪರಾಧ ಮಾಡಿರುವುದು ಕಂಡು ಬರುವುದಿಲ್ಲ. ಒಟ್ಟಾರೆಯಾಗಿ ಸಾಕ್ಷ್ಯಾಧಾರಗಳನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ ಅವುಗಳು ಒಂದಕ್ಕೊಂದು ಪೂರಕವಾಗದೇ ಇರುವುದರಿಂದ ಅಭಿಯೋಜನೆಯ ಪ್ರಕರಣದ ಮೇಲೆ ಸಂಶಯ ಉದ್ಭವವಾಗುತ್ತದೆ. ಕಾರಣ ನ್ಯಾಯಾಲಯದ ಅಭಿಪ್ರಾಯದಲ್ಲಿ ಅಭಿಯೋಜನೆಯು ಆರೋಪಿತರ ವಿರುದ್ಧ ಮಾಡಲಾದ ಆಪಾದನೆಯನ್ನು ಸಂಶಯಾತೀತವಾಗಿ ಸಿದ್ಧಪಡಿಸಲು ವಿಫಲರಾಗಿರುತ್ತಾರೆ. ಸದರಿ ವಿಫಲತೆಯ ಲಾಭವನ್ನು ಆರೋಪಿತರಿಗೆ ನೀಡಿ ಆರೋಪಿತರನ್ನು ಬಿಡುಗಡೆಗೊಳಿಸುವುದು ಸೂಕ್ತ ಎಂದು ಈ ನ್ಯಾಯಾಲಯವು ಭಾವಿಸುತ್ತದೆ. ಅಪರಾಧಿಕ ತತ್ವಗಳ ಪ್ರಕಾರ ಅಪರಾಧಿಕ ಪ್ರಕರಣಗಳಲ್ಲಿ ಅಭಿಯೋಜನೆಯ ಪ್ರಕರಣಗಳ ಮೇಲೆ ಸಂಶಯ ಉದ್ಭವಿಸಿದರೆ ಸದರಿ ಸಂಶಯದ ಲಾಭ ಆರೋಪಿತರಿಗೆ ನೀಡಬೇಕೆಂದು ಇರುತ್ತದೆ . ಆದ್ದರಿಂದ ಅಂಶ-1 ರಿಂದ 4 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

**21.** **ಅಂಶ ನಂ.5**- ಈ ಮೇಲಿನ ಅಂಶ-1 ರಿಂದ 4 ರಲ್ಲಿನ ಅಂಶಗಳ ಆಧಾರದ ಮೇಲೆ ಈ ಕೆಳಗಿನಂತೆ ಆದೇಶಿಸಲಾಗಿದೆ.

**ಆದೇಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿತರನ್ನು ಭಾರತೀಯ ದಂಡ ಸಂಹಿತೆ ಕಲಂ 447,341, 504 ಮತ್ತು 506 ಸಹ ವಾಚಕ ಕಲಂ 149 ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಂದ ನಿರ್ದೋಷಿಗಳೆಂದು ತೀರ್ಮಾನಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿತರು ಬರೆದುಕೊಟ್ಟಿರುವ ಮುಚ್ಚಳಿಕೆ ಪತ್ರ ಮತ್ತು ಆರೋಪಿತರ ಪರ ಜಾಮೀನುದಾರರು ನೀಡಿರುವ ಜಾಮೀನು ಮುಚ್ಚಳಿಕೆ ಪತ್ರ ಕಲಂ 437(ಎ) ಸಿ.ಆರ್.ಪಿ.ಸಿ.ಯಂತೆ ಮುಂದಿನ 6 ತಿಂಗಳ ಕಾಲ ಜಾರಿಯಲ್ಲಿರುತ್ತದೆಂದು ಆದೇಶಿಸಲಾಗಿದೆ.

**(**ಶೀಘ್ರಲಿಪಿಗಾರ್ತಿ ನನ್ನ ಉಕ್ತಲೇಖನದಂತೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ್ದನ್ನು ಪರಿಷ್ಕರಿಸಿ**,** ತೆರೆದ ನ್ಯಾಯಾಲಯದಲ್ಲಿ ತೀರ್ಪನ್ನು ದಿನಾಂಕ **2ನೇ ಜುಲೈ 2026** ರಂದು ಘೋಷಿಸಲಾಯಿತು**)**

**Sd/-**

**( ಸುಜಾತ ಎ ಬಿ)**

**ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ**

**ಕುಣಿಗಲ್ .**

**ಅನುಬಂಧ**

**ಅಭಿಯೋಜನೆಯ ಪರ ವಿಚಾರಣೆಯಾದ ಸಾಕ್ಷಿಗಳ ಪಟ್ಟಿ:**

ಪ್ರಾಸಾ.1 ಃ ಗೌಡಯ್ಯ

ಪ್ರಾಸಾ.2 ಃ ನಾಗರತ್ನಮ್ಮ

ಪ್ರಾಸಾ.3 ಃ ಶ್ರೀನಿವಾಸಯ್ಯ ಎಸ್

KATK510022692018



**ಅಭಿಯೋಜನೆಯ ಪರ ನಿಶಾನೆಗೊಳಪಟ್ಟ ದಾಖಲಾತಿಗಳ ಪಟ್ಟಿಃ**

| | | |
|---|---|---|
| ನಿಪಿ.1 | ಃ | ದೂರು |
| ನಿಪಿ.1(ಎ ) | ಃ | ಪ್ರಾಸಾ.1 ರವರ ಸಹಿ |
| ನಿಪಿ.1(ಬಿ ) | ಃ | ಪ್ರಾಸಾ.3 ರವರ ಸಹಿ |
| ನಿಪಿ.2 | ಃ | ಸ್ಥಳ ಪಂಚನಾಮೆ |
| ನಿಪಿ.2(ಎ ) | ಃ | ಪ್ರಾಸಾ.1 ರವರ ಸಹಿ |
| ನಿಪಿ.2(ಬಿ ) | ಃ | ಪ್ರಾಸಾ.3 ರವರ ಸಹಿ |
| ನಿಪಿ.3 | ಃ | ಪ್ರಥಮ ವರ್ತಮಾನ ವರದಿ |
| ನಿಪಿ.3(ಎ) | ಃ | ಪ್ರಾಸಾ.3 ರವರ ಸಹಿ |

**ಅಭಿಯೋಜನೆಯ ಪರ ನಿಶಾನೆಗೊಳಪಟ್ಟ ಮುದ್ದೆಮಾಲುಗಳ ಪಟ್ಟಿಃ- ಇಲ್ಲಾ -**

**ಆರೋಪಿತರ ಪರ ವಿಚಾರಣೆಯಾದ ಸಾಕ್ಷಿ ಗಳ ಪಟ್ಟಿಃ- ಇಲ್ಲಾ -**

**ಆರೋಪಿತರ ಪರ ನಿಶಾನೆಗೊಳಪಟ್ಟ ದಾಖಲಾತಿಗಳ ಪಟ್ಟಿಃ- ಇಲ್ಲಾ -**

**Sd/-**

**ಪ್ರಧಾನ ಸಿ .ಜೆ ಮತ್ತು ಜೆ.ಎಂ.ಎಫ್.ಸಿ**

**ಕುಣಿಗಲ್ .**